# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ-577007

ದೂರವಾಣಿ ಸಂಖ್ಯೆ:08192-208029, ಫ್ಯಾಕ್ಸ್:08192-208008


: ವಿದ್ಯಾದಾನೇನ ವರ್ಧತೆ, ವಿದ್ಯಾ ವಿನಯೇನ ಶೋಭತೆ, ವಿದ್ಯಯಾ ವಿಂಧತೆ ಅಮೃತಂ :

ಸಂಖ್ಯೆ:ದಾವಿವಿ/ಶೈ/501/2021-22 | 1608 ದಿನಾಂಕ:23.08.2021

## :ಅಧಿಸೂಚನೆ:

**ವಿಷಯ:** ರಾಷ್ಟ್ರೀಯ ಶಿಕ್ಷಣ ನೀತಿ **NEP-2020ರ** ನಿಯಮಾನುಸಾರ ವಿಶ್ವವಿದ್ಯಾನಿಲಯದಲ್ಲಿ ಸ್ನಾತಕ ಪದವಿ ಕೋರ್ಸುಗಳ ಪ್ರವೇಶಾತಿ ಪ್ರಾರಂಭಿಸುತ್ತಿರುವ ಕುರಿತು.

**ಉಲ್ಲೇಖ:**
1. ಸರ್ಕಾರದ ಆದೇಶ ಸಂ:ಇಡಿ 260 ಯುಎನ್‌ಇ 2019 (ಭಾಗ-1), ಬೆಂಗಳೂರು ದಿನಾಂಕ:07.08.2021.
2. ಮಾನ್ಯ ಕುಲಪತಿಗಳ ನಿರ್ದೇಶನ ದಿನಾಂಕ:27.08.2021

******

ಭಾರತ ಸರ್ಕಾರವು ರಾಷ್ಟ್ರ ಮಟ್ಟದಲ್ಲಿ ಜಾರಿಗೊಳಿಸಲು ಉದ್ದೇಶಿಸಿರುವ ರಾಷ್ಟ್ರೀಯ ಶಿಕ್ಷಣ ನೀತಿ-2020ರನ್ವಯ ವಿಶ್ವವಿದ್ಯಾನಿಲಯದ ಮುಖ್ಯ ಕೇಂದ್ರ ಕಛೇರಿ, ಶಿವಗಂಗೋತ್ರಿ ಆವರಣದಲ್ಲಿ ಈ ಕೆಳಕಂಡ ಸ್ನಾತಕ ಪದವಿ ಕೋರ್ಸುಗಳ ಪ್ರವೇಶಾತಿಯನ್ನು 2021-22ನೇ ಶೈಕ್ಷಣಿಕ ಸಾಲಿನಿಂದ ಪ್ರಾರಂಭಿಸಲಾಗಿದೆ.

**:ವಿಶ್ವವಿದ್ಯಾನಿಲಯ ಕೇಂದ್ರ, ಶಿವಗಂಗೋತ್ರಿ ಆವರಣ, ದಾವಣಗೆರೆ-577007 ಇಲ್ಲಿರುವ ಸ್ನಾತಕ ಪದವಿ ವಿಷಯಗಳು:**

| ಕ್ರ.ಸಂ. | ವಿಷಯಗಳು | ವ್ಯಾಸಂಗದ ವಿಷಯಗಳು |
|---|---|---|
| 1 | ಬಿ.ಎ. | ಅರ್ಥಶಾಸ್ತ್ರ, ರಾಜ್ಯಶಾಸ್ತ್ರ |
| 2 | ಬಿ.ಎಸ್ಸಿ. | ಗಣಿತಶಾಸ್ತ್ರ, ಗಣಕ ವಿಜ್ಞಾನ |
| 3 | ಬಿ.ಕಾಂ. | ಕಡ್ಡಾಯ ವಿಷಯಗಳು |
| 4 | ಬಿ.ಬಿ.ಎ. | ಕಡ್ಡಾಯ ವಿಷಯಗಳು |

ವಿಶ್ವವಿದ್ಯಾನಿಲಯ ಆವರಣದಲ್ಲಿ ಸ್ನಾತಕ ಪದವಿ ತರಗತಿಗಳಿಗೆ ಪ್ರವೇಶ ಪಡೆಯಲು ಆಸಕ್ತಿಯುಳ್ಳ ಪಿಯುಸಿ/ತತ್ಸಮಾನ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ವಿದ್ಯಾರ್ಥಿಗಳು ಅರ್ಜಿ ನಮೂನೆಗಳನ್ನು ನಿಗದಿತ ಶುಲ್ಕ (ಸಾಮಾನ್ಯ ವರ್ಗದ ವಿದ್ಯಾರ್ಥಿಗಳು ರೂ.100/- ಹಾಗೂ ಪ.ಜಾ/ಪ.ಪಂ/ಪ್ರವರ್ಗ-1ರ ವಿದ್ಯಾರ್ಥಿಗಳು ರೂ.80/-) ಗಳನ್ನು ಪಾವತಿಸಿ ಅರ್ಜಿಗಳನ್ನು ಪಡೆಯಬಹುದಾಗಿದೆ.

| | |
|---|---|
| **ಅರ್ಜಿಗಳನ್ನು ವಿತರಣಾ ಪ್ರಾರಂಭದ ದಿನಾಂಕ:** | **23.08.2021** |
| **ಅರ್ಜಿಗಳನ್ನು ಪಡೆಯಲು ಕೊನೆಯ ದಿನಾಂಕ:** | **30.09.2021** |
| **ಅರ್ಜಿಗಳನ್ನು ನೀಡುವ ಸ್ಥಳ:** | **ಶೈಕ್ಷಣಿಕ ವಿಭಾಗ** |

**ಸೂಚನೆಗಳು:**

- ✓ ಅರ್ಜಿ ಶುಲ್ಕವನ್ನು 'ಹಣಕಾಸು ಅಧಿಕಾರಿಗಳು' ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ' ಇವರ ಪದನಾಮದಲ್ಲಿ ಭರಿಸುವುದು ಅಥವಾ ವಿಶ್ವವಿದ್ಯಾನಿಲಯದಲ್ಲಿ ಇರುವ ಎಸ್.ಬಿ.ಐ. ಶಾಖೆಯಲ್ಲಿ ಚಲನ್ ಮೂಲಕ ಉಳಿತಾಯ ಖಾತೆ ಸಂಖ್ಯೆ:64050447113ಕ್ಕೆ ಹಣ ಪಾವತಿಸಬಹುದು.
- ✓ ಇತರೆ ಯಾವುದೇ ಮಾಹಿತಿ ಅವಶ್ಯವಿದ್ದಲ್ಲಿ ಕರ್ತವ್ಯದ ದಿನಗಳಂದು ಪೂರ್ವಾಹ್ನ 10:30 ರಿಂದ ಅಪರಾಹ್ನ 3:30ರವರೆಗೆ ಪಡೆಯಬಹುದು. ಅಭ್ಯರ್ಥಿಗಳು ಈ ದೂರವಾಣಿ ಸಂಖ್ಯೆ:08192-208029ಕ್ಕೆ ಬೆಳಿಗ್ಗೆ 10.30 ರಿಂದ 5.30ರ ನಡುವೆ ಸಂಪರ್ಕಿಸಬಹುದು.
- ✓ ವಿಶ್ವವಿದ್ಯಾನಿಲಯದ ಅಂತರ್ಜಾಲದಲ್ಲಿಯೂ ಸಹ ಮಾಹಿತಿ ಲಭ್ಯವಿರುತ್ತದೆ.davangereuniversity.ac.in

ಆದೇಶಾನುಸಾರ

23/8/2021

ಕುಲಸಚಿವರು

ದಾವಣಗೆರೆ ವಿಶ್ವವಿದ್ಯಾನಿಲಯ

ಶಿವಗಂಗೋತ್ರಿ, ದಾವಣಗೆರೆ-57700..

ಗೆ,

1. ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಅಧ್ಯಕ್ಷರು/ಸಂಯೋಜನಾಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ.
2. ವಿಶ್ವವಿದ್ಯಾನಿಲಯದ ವ್ಯಾಪ್ತಿಯ ಎಲ್ಲಾ ಸ್ನಾತಕ ಕಾಲೇಜುಗಳ ಪ್ರಾಂಶುಪಾಲರುಗಳಿಗೆ,
3. ಪ್ರಾಚಾರ್ಯರು, ವಿಶ್ವವಿದ್ಯಾನಿಲಯ ದೃಶ್ಯಕಲಾ ಮಹಾವಿದ್ಯಾಲಯ, ದಾವಣಗೆರೆ.
4. ಕಲಾ/ವಾಣಿಜ್ಯ/ವಿಜ್ಞಾನ/ಶಿಕ್ಷಣ ನಿಕಾಯಗಳ ಡೀನರುಗಳಿಗೆ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
5. ಹಣಕಾಸು ಅಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ.
6. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಪರಿಷತ್ತು, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ.
7. ನಿರ್ದೇಶಕರು, ವಿದ್ಯಾರ್ಥಿ ಕಲ್ಯಾಣ, ಪಿ.ಎಂ.ಇ. ಬೋರ್ಡ್, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ.
8. ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ, ಗುಡ್ಡದರಂಗವನಹಳ್ಳಿ, ರಾ.ಹೆ-13, ಚಿತ್ರದುರ್ಗ.
9. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯ ಘಟಕ ಕಾಲೇಜು, ತುರುವನುರು.
10. ಉಪ-ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ, ದಾವಣಗೆರೆ ಇವರಿಗೆ ವೃತ್ತ ಪತ್ರಿಕೆಗಳಲ್ಲಿ ಉಚಿತವಾಗಿ ಪ್ರಕಟಿಸಲು ಕೋರಿದೆ.
11. ಆಪ್ತ ಸಹಾಯಕರು, ಮಾನ್ಯ ಕುಲಪತಿಗಳ/ಕುಲಸಚಿವರ/ಕುಲಸಚಿವರು (ಪ) ಕಾರ್ಯಾಲಯ, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ.
12. ನಿಲಯ ನಿರ್ದೇಶಕರು, ಆಕಾಶವಾಣಿ, ಭದ್ರಾವತಿ/ಚಿತ್ರದುರ್ಗ ಇವರಿಗೆ ಮಾಹಿತಿಗಾಗಿ ಹಾಗೂ ಸದರಿ ಪ್ರಕಟಣೆಯನ್ನು ಸುದ್ದಿರೂಪದಲ್ಲಿ ಉಚಿತವಾಗಿ ಪ್ರಸರಿಸಲು ಕೋರಿದೆ.
13. ಜಿಲ್ಲಾ ಬುಲೆಟಿನ್ ಅಧಿಕಾರಿಗಳು, ಜಿಲ್ಲಾಧಿಕಾರಿಗಳವರ ಕಛೇರಿ, ದಾವಣಗೆರೆ/ಚಿತ್ರದುರ್ಗ ಜಿಲ್ಲೆ.
14. ಉಪಕುಲಸಚಿವರ, ಸಹಾಯಕ ಕುಲಸಚಿವರು/ಅಧೀಕ್ಷಕರು, ಶೈಕ್ಷಣಿಕ/ಸಿಬ್ಬಂಧಿ/ಪರೀಕ್ಷಾ ವಿಭಾಗ ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ.